ಓ.ಎಸ್. ನಂಃ **65/2015**
ಪಿ ಡಬ್ಲ್ಯೂಃ **3**

ದಿನಾಂಕಃ 01-08-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ **12** ನೇ ಪ್ರತಿವಾದಿಯ ಪರ ಶ್ರೀ ಎಂ ಬಿ ಪಿ ವಕೀಲರಿಂದಃ

ಈ ದಾವೆಯನ್ನು ಯಾರು ಯಾರ ವಿರುದ್ಧ ದಾಖಲಿಸಿದ್ದಾರೆ ಎಂದರೆ ಸಾಕ್ಷಿಯು 3 ನೇ ಪ್ರತಿವಾದಿ ಮಲ್ಲಮ್ಮ ರವರು 12 ನೇ ಪ್ರತಿವಾದಿ ಭಾಗಣ್ಣ ರವರ ವಿರುದ್ಧ ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಸರ್ವೆ ನಂ.63 ರ 02 ಎಕರೆ 2 ಗುಂಟೆ ಹಾಗೂ 63/1 ರಲ್ಲಿನ 32 ಗುಂಟೆಗೆ ಸಂಬಂಧಿಸಿದಂತೆ ದಾಖಲಿಸಿದ್ದಾರೆ. ಸದರಿ ಜಮೀನುಗಳು ಮೂಲತಃ ಯಾರ ಹೆಸರಿಲ್ಲಿ ಇದ್ದವು ಎಂದರೆ ಸಾಕ್ಷಿಯು ವಾದಿಯ ತಂದೆ ಹಾಗೂ ಆತನ ಪೂರ್ವಜರ ಹೆಸರಿನಲ್ಲಿ ಇದ್ದವು ಎಂದು ನುಡಿಯುತ್ತಾರೆ. ನಾನು ದಾವಾ ಜಮೀನಿನ ಪಹಣಿ ಪತ್ರಿಕೆಯನ್ನು ನೋಡಿಲ್ಲ ಎಂದರೆ ಸರಿ.

2. ನಾನು ಚಂದಪ್ಪ ರವರನ್ನು ನೋಡಿಲ್ಲ. ಚಂದಪ್ಪನ ಮಗನ ಹೆಸರು ಏನು ಎಂದರೆ ಸಾಕ್ಷಿಯು ರಾಮಣ್ಣ ಮತ್ತು ಆಶಪ್ಪ ಎಂದು ನುಡಿಯುತ್ತಾರೆ. ಸಾಬಣ್ಣ ಯಾರು ಎಂದರೆ ಸಾಕ್ಷಿಯು ದುರ್ಗಪ್ಪನ ಮಗ ಎಂದು ನುಡಿಯುತ್ತಾರೆ. ರಾಮಣ್ಣ ಮತ್ತು ಆಶಪ್ಪ ರವರ ತಂದೆಯ ಹೆಸರು ಸಹ ಸಾಬಣ್ಣ ಎಂದು ಇರುತ್ತದೆ ಎಂದರೆ ಸರಿ. ಸದರಿ ಸಾಬಣ್ಣನ ತಂದೆಯ ಹೆಸರು ಚಂದಪ್ಪ ಎಂದು ಇರುತ್ತದೆ ಎಂದರೆ ಸರಿ. ದುರ್ಗಪ್ಪ ತಂದೆ ಭೀಮಪ್ಪ ರವರ ಕುಟುಂಬವೇ ಬೇರೆ ಹಾಗೂ ಸಾಬಣ್ಣ ತಂದೆ ಚಂದಪ್ಪ ರವರ ಕುಟುಂಬವೇ ಬೇರೆ ಎಂದರೆ ಸರಿ. ಸದರಿಯವರ ಆಸ್ತಿಗಳು ಸಹ ಬೇರೆ ಬೇರೆ ಇರುತ್ತವೆ ಎಂದರೆ ಸರಿ. ದಾವಾ ಆಸ್ತಿಗಳು ಸಾಬಣ್ಣ ತಂದೆ ಚಂದಪ್ಪ ರವರ ಕುಟುಂಬಕ್ಕೆ ಸೇರಿದ್ದಾಗಿರುತ್ತವೆ ಎಂದರೆ ಸರಿ.

3. ದಾವಾ ಆಸ್ತಿಗಳು 2 ನೇ ಪ್ರತಿವಾದಿ ನರಸಮ್ಮ ರವರ ಹೆಸರಿನಲ್ಲಿ ಇದ್ದವು ಎಂದರೆ ಸರಿ. 3 ರಿಂದ 7 ನೇ ಪ್ರತಿವಾದಿಯರು 2 ನೇ ಪ್ರತಿವಾದಿಯ ಮಕ್ಕಳಾಗಿರುತ್ತಾರೆ ಎಂದರೆ ಸರಿ. 3, 5 ಮತ್ತು 7 ನೇ ಪ್ರತಿವಾದಿಯರು ಮದುವೆ ಮಾಡಿಕೊಂಡು ತಮ್ಮ ತಮ್ಮ ಗಂಡಂದಿರ ಮನೆಗಳಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗಳು 2 ನೇ ಪ್ರತಿವಾದಿಗೆ ಸಂಬಂಧಿಸಿರುವ ಆಸ್ತಿಗಳಾಗಿರುತ್ತವೆ ಎಂದರೆ ಸರಿ. 2 ನೇ ಪ್ರತಿವಾದಿಗೆ ತನ್ನ ಮಕ್ಕಳ ಮದುವೆ ಮಾಡಲು ಹಣದ ಅಡಚಣೆ ಇತ್ತು ಎಂದರೆ ಸರಿ. ಸದರಿ ಹಣದ ಅಡಚಣೆ ಇದ್ದುದ್ದರಿಂದ ದಿನಾಂಕ 27.02.2019 ರಂದು 2 ನೇ ಪ್ರತಿವಾದಿ ದಾವಾ ಎರಡು ಜಮೀನುಗಳನ್ನು 12 ನೇ ಪ್ರತಿವಾದಿಗೆ ಮಾರಾಟ

ಮಾಡಿದ್ದಾರೆ ಎಂದರೆ ಸರಿ. ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಆ ಪ್ರಕಾರ 12 ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾಗಿರುತ್ತದೆ ಎಂದರೆ ಸರಿ. ಖರೀದಿ ಪ್ರಕಾರ 12 ನೇ ಪ್ರತಿವಾದಿಯೇ ದಾವಾ ಎರಡು ಜಮೀನುಗಳ ಮಾಲೀಕ ಮತ್ತು ಕಬ್ಜೆದಾರ ಆಗಿರುತ್ತಾರೆ ಎಂದರೆ ಸಾಕ್ಷಿಯು ಸರಿ, ಆತನೆ ಕಬ್ಜಾದಲ್ಲಿ ಇದ್ದಾನೆ ಎಂದು ನುಡಿಯುತ್ತಾರೆ. ನಂತರ 1 ನೇ ಪ್ರತಿವಾದಿ ದಾವಾ 02 ಎಕರೆ18 ಗುಂಟೆ ಜಮೀನನ್ನು 13 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾನೆ ಎಂದರೆ ಸರಿ. ಖರೀದಿ ಪ್ರಕಾರ 13 ನೇ ಪ್ರತಿವಾದಿಯ ಹೆಸರಿಗೆ ಹಕ್ಕು ಬದಲಾವಣೆ ಆಗಿದೆ ಎಂದರೆ ಸರಿ. ಅದೇ ಪ್ರಕಾರ 13 ನೇ ಪ್ರತಿವಾದಿ ಸದರಿ 02 ಎಕರೆ 18 ಗುಂಟೆ ಜಮೀನಿನ ಮಾಲಿಕ ಮತ್ತು ಕಬ್ಜೆದಾರ ಆಗಿರುತ್ತಾರೆ ಎಂದರೆ ಸರಿ. 12 ನೇ ಪ್ರತಿವಾದಿ ಉಳಿದ ದಾವಾ 32 ಗುಂಟೆ ಜಮೀನಿನ ಮಾಲಿಕ ಹಾಗೂ ಕಬ್ಜೆದಾರ ಆಗಿರುತ್ತಾನೆ ಎಂದರೆ ಸರಿ.

4. 8 ರಿಂದ 11 ನೇ ಪ್ರತಿವಾದಿಯರು ದುರ್ಗಪ್ಪ ರವರ ವಂಶಸ್ಥರು ಆಗಿರುತ್ತಾರೆ ಎಂದರೆ ಸಾಕ್ಷಿಯು ಆತನ ಮಕ್ಕಳಾಗಿರುತ್ತಾರೆ ಎಂದು ನುಡಿಯುತ್ತಾರೆ. ದುರ್ಗಪ್ಪ ತೀರಿಕೊಂಡು ಸುಮಾರು 25-30 ವರುಷಗಳು ಆಗಿವೆ. ದುರ್ಗಪ್ಪ ರವರು 01 ಎಕರೆ ಜಮೀನು ಹೊಂದಿದ್ದರು. ಸದರಿ ಆಸ್ತಿ ವಾದಿ ಹಾಗೂ 8 ರಿಂದ 11 ನೇ ಪ್ರತಿವಾದಿಯರಿಗೆ ಸಂಬಂಧಿಸಿದ್ದಾಗಿರುತ್ತದೆ ಎಂದರೆ ಸರಿ. ಚಂದಪ್ಪ ಮತ್ತು ದುರ್ಗಪ್ಪ ರವರ ಕುಟುಂಬ ಬೇರೆ ಬೇರೆಯಾಗಿರುವುದರಿಂದ ಹಾಗೂ ದಾವಾ ಜಮೀನುಗಳು ಚಂದಪ್ಪ ರವರ ಶಾಖೆಗೆ ಸೇರಿದ್ದಾಗಿರುವುದರಿಂದ ವಾದಿಗೆ ದಾವಾ ಜಮೀನಿನಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿ.

5. ರಾಂಪೂರ ಗ್ರಾಮದಲ್ಲಿ ಜಮೀನುಗಳ ಬೆಲೆ ಈಗ ಪ್ರತೀ ಎಕರೆಗೆ 10-12 ಲಕ್ಷ ಇರುತ್ತದೆ. ಈಗ ಜಮೀನುಗಳು ಬೆಲೆ ಏರಿಕೆ ಆಗಿರುವುದರಿಂದ ವಾದಿಯು ಸುಳ್ಳು ದಾವೆ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನರಸಪ್ಪ ಎಂಬಾತ ವಾದಿಯ ಮಗ ಆಗಿರುತ್ತಾನೆ ಎಂದರೆ ಸರಿ. ಗಣೇಶ ಎಂಬಾತ ಸಹ ವಾದಿಯ ಮಗ ಆಗಿರುತ್ತಾನ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನರಸಪ್ಪ ಮತ್ತು ನಾಗಪ್ಪ ಇಬ್ಬರು ಮಾತ್ರ ವಾದಿಯ ಮಕ್ಕಳಾಗಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯ ಮಗ ನರಸಪ್ಪ ರವರ ಹೆಸರಿನಲ್ಲಿ ಗಾಜರಕೋಟ ಸೀಮೆಯಲ್ಲಿ 02 ಎಕರೆ ಜಮೀನು ಇದೆ ಎಂದರೆ ಸರಿ. ಗಣೇಶನ ಹೆಸರಿನಲ್ಲಿಯೂ ಸಹ 01 ಎಕರೆ 35 ಗುಂಟೆ ಜಮೀನು ಇದೆ ಎಂದರೆ ಸರಿ. ಗಾಜರಕೋಟ ಸೀಮೆಯಲ್ಲಿ ವಾದಿಯ ಹೆಸರಿನಲ್ಲಿಯೂ ಸಹ 02 ಎಕರೆ ಜಮೀನು ಇದೆ ಎಂದರೆ ಸರಿ. ದುರ್ಗಪ್ಪ ರವರಿಗೆ ಸೇರಿದ್ದ ಆಸ್ತಿಗಳು ಈಗ ವಾದಿ ಹಾಗೂ ಆತನ ಮಕ್ಕಳ ಹೆಸರಿನಲ್ಲಿ ಇವೆ ಎಂದರೆ ಸರಿ.

6. ಗಾಜರಕೋಟ ಸೀಮೆಯಲ್ಲಿ 2 ನೇ ಪ್ರತಿವಾದಿಯ ಹೆಸರಿನಲ್ಲಿಯೂ ಸಹ 02 ಎಕರೆ ಜಮೀನು ಇದೆ ಎಂದರೆ ಸರಿ. 6 ನೇ ಪ್ರತಿವಾದಿಯ ಹೆಸರಿನಲ್ಲಿಯೂ ಸಹ 06 ಎಕರೆ 20

ಗುಂಟೆ ಜಮೀನು ಇದೆ ಎಂದರೆ ಸರಿ. ನಾನು ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ ಪ್ರಮಾಣ ಪತ್ರ ಸಲ್ಲಿಸಿದ್ದೆನೆಂದರೆ ಸರಿಯಲ್ಲ.

<u>ಪಾಟೀ ಸವಾಲುಃ **2** ರಿಂದ **4** ಮತ್ತು **6** ನೇ ಪ್ರತಿವಾದಿಯರ ಪರ ಶ್ರೀ ಎಂ ಎಂ ಕೆ ವಕೀಲರಿಂದಃ</u>

7. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸರಿ. ವಾದಿಯ ಹೆಸರಿನಲ್ಲಿ ರಾಂಪೂರ ಸೀಮೆಯಲ್ಲಿ ಸರ್ವೆ ನಂ.998 ರಲ್ಲಿ 32 ಗುಂಟೆ ಜಮೀನು ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ವಾದಿಯು ದಿನಾಂಕ 27.05.1994 ರಂದು 2 ನೇ ಪ್ರತಿವಾದಿಯ ಗಂಡನಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನಾನು ಸಹ ಆ ಬಗ್ಗೆ ಕೇಳಿದ್ದೇನೆಂದು ನುಡಿಯುತ್ತಾರೆ. ಸದರಿ ಮಾರಾಟದಿಂದ ದಿನದಿಂದ ಈವರೆಗೆ 2 ನೇ ಪ್ರತಿವಾದಿಯ ಕುಟುಂಬದವರು ಸದರಿ ಜಮೀನು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ವಾದಿಗೂ ಹಾಗೂ 1 ರಿಂದ 7 ನೇ ಪ್ರತಿವಾದಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿ. ವಾದಿಯ ಕುಟುಂಬವೇ ಬೇರೆ ಹಾಗೂ 1 ರಿಂದ 7 ನೇ ಪ್ರತಿವಾದಿಯರ ಕುಟುಂಬವೇ ಬೇರೆ ಎಂದರೆ ಸರಿ. 2 ರಿಂದ 7 ನೇ ಪ್ರತಿವಾದಿಯರ ವಿರುದ್ಧ ದಾವೆ ದಾಖಲಿಸಲು ವಾದಿಗೆ ಅಧಿಕಾರ ಇರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇರುವುದಿಲ್ಲ**.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ